# ನುಡಿಮುತ್ತುಗಳ ಅಕ್ಷರಮಾಲೆ

ಎದುರ್ಕಳ ಕೆ. ಶಂಕರನಾರಾಯಣ ಭಟ್

**ಅ** – ಅನವರತವೂ ಸತ್ಯವಂತನಾಗಿರು.

**ಆ** – ಆಲೋಚಿಸಿ ಮಾತನಾಡು.

**ಇ** – ಇಂದಿನ ಕೆಲಸ ಇಂದೇ ಪೂರೈಸು.

**ಈ** – ಈಶ್ವರಭಕ್ತನಾಗು.

**ಉ** – ಉದಾತ್ತವಾದ ಧ್ಯೇಯವನ್ನು ಇಟ್ಟು ಕೊಂಡು ಉದ್ಯಮಶೀಲನಾಗಿ ಜೀವನವನ್ನು ನಿರ್ವಹಿಸು.

**ಋ** – ಋಣಮುಕ್ತನಾಗಿ ಬಾಳಿದಾಗ ಬದುಕು ಸುಖಶಾಂತಿ ಸಂಪನ್ನವಾಗುತ್ತದೆ.

**ಎ** – ಎಲ್ಲೆ ಮೀರಿದ ವರ್ತನೆ, ಶಕ್ತಿ ಮೀರಿದ ದುಡಿತ – ಎರಡರಿಂದಲೂ ದುಃಖ, ಕಷ್ಟಗಳು ಬಂದೇ ಬರುತ್ತವೆ.

**ಏ** – ಏನೇ ಬರಲಿ, ದೇವರಲ್ಲಿ ನಂಬಿಕೆ ಇರಲಿ.

**ಐ** – ಐಕ್ಯವಿದ್ದಲ್ಲಿ ಒಲವಿದೆ.

**ಒ** – ಒಂದು ಬಾರಿಗೆ ಒಂದೇ ಕೆಲಸವನ್ನು ಮಾಡು.

**ಓ** – ಓದುಗಾರಿಕೆಯು ಕ್ರಮವನ್ನು ಅನುಸರಿಸಿರಲಿ. ಆಗ ವಿದ್ಯೆಯು ಅಂಗೈಯ ನೆಲ್ಲಿಕಾಯಿ!

**ಔ** – ಔಚಿತ್ಯವರಿತು ಮಾತನಾಡು.

**ಅಂ**–ಅಂತಃಕರಣ ಒಪ್ಪುವಂತೆ ಕೆಲಸ ಮಾಡು.

**ಅಃ** – ಅಃಹಹಾ! ಎನ್ನುವ ಆನಂದದ ನಗು ಜೀವನದಲ್ಲಿ ಸದಾ ತುಂಬಿರಲಿ.

**ಕ** – ಕರ್ತವ್ಯದ ಪಾಲನೆಯಲ್ಲಿ ಪ್ರೀತಿ ಇರಲಿ.

**ಖ** – ಖತಿಯು ಮತಿಯನ್ನು ಕೆಡಿಸುವುದು.

**ಗ** –ಗಂಡುಗಲಿಯಾಗು, ತಾಯ್ನಾಡ ರಕ್ಷಣೆಗೆ.

**ಘ** – ಘಂಟೆಗೆ ಸರಿಯಾಗಿ ದೈನಂದಿನ ಜೀವನ ಕಾರ್ಯಗಳನ್ನು ನಡೆಸುವವನಿಗೆ ಯಶಸ್ಸು ದೊರಕುವುದರಲ್ಲಿ ಸಂದೇಹವಿಲ್ಲ.

**ಙ** – ಪಙ್ಕಜವು (ಕಮಲ) ಕೆಸರಿನಲ್ಲಿ ಹುಟ್ಟಿ ಬೆಳೆದರೂ ಅದಕ್ಕೆ ಕೊಳೆ ಅಂಟುವುದಿಲ್ಲ. ಅದು ಪೂಜಾಲಂಕಾರಕ್ಕೆ ಅರ್ಹವಾಗಿರುತ್ತದೆ. ಅಂತೆಯೇ ಮಾನವ ಜೀವನವೂ ಕೂಡ ಹುಟ್ಟಿನ ಸ್ಥಿತಿಗತಿಗಳನ್ನು ಮೀರಿ ಶಕ್ತಿ–ಸೌಂದರ್ಯದಿಂದ ಕೂಡಿ ಅರಳಿದಾಗ ಸರ್ವತ್ರ ಮಾನ್ಯವಾಗುತ್ತದೆ.

**ಚ** – ಚತುರೋಪಾಯದಿಂದ (ಸಾಮ, ದಾನ, ಭೇದ, ದಂಡ) ಜೀವನದ ಎಡರುತೊಡರುಗಳನ್ನು ಎದುರಿಸಿ ಜಯಶೀಲನಾಗು.

**ಛ** – ಛಲವಂತನಾಗು ಸತ್ಕಾರ್ಯದಲ್ಲಿ.

**ಜ** – ಜನಮೆಚ್ಚುಗೆಗಿಂತ ಜನಾರ್ದನ ಮೆಚ್ಚುವಂತೆ ಜೀವನವನ್ನು ನಡೆಸಿದರೆ ಜೀವನ ಯಶೋಗಾಥೆಯಾಗುತ್ತದೆ.

**ಝ**–ಝಗಝಗಿಸುವ ಆಡಂಬರದ ಉಡುಪಿಗಿಂತಲೂ ಸರಳವಾದ ಉಡುಗೆ ತೊಡುಗೆ ಚಂದ.

**ಞ** – ಪಞ್ಜರದ ಗಿಣಿಯಂತೆ ಬರೇ ಬಾಯಿಪಾಠ ಮಾಡುವ ವಿದ್ಯೆಯಿಂದ ಫಲವಿಲ್ಲ.

**ಟ** – ಟಗರಿನಂತೆ ಗುಂಪಿನ ಪ್ರಭಾವಕ್ಕೆ ಅಡಿಯಾಳಾದಾಗ ಸ್ವತಂತ್ರವಾಗಿ ಚಿಂತನೆ ಮಾಡುವ ಸಾಮರ್ಥ್ಯ ಕುಂದುತ್ತದೆ.

**ಠ** – ಠಕ್ಕನಿಗೆ ಎಲ್ಲೂ ಬೆಂಬಲವಿಲ್ಲ.

**ಡ** – ಡಂಭಾಚಾರವಂತನಿಗೆ ಬಾಳಿನಲ್ಲಿ ಸೋಲು ಎಂದಾದರೂ ತಪ್ಪಿದ್ದಲ್ಲ.

**ಢ** – ಮೂಢನಿಗೆ ಜೀವನದಲ್ಲಿ ಜಯವಿಲ್ಲ.

**ಣ** – ಣ ಅಕ್ಷರದ ಎಡಕ್ಕೆ ಹ ಎಂಬಕ್ಷರ ಸೇರಿದರೆ ಹಣ ಎಂಬ ಅರ್ಥಪೂರ್ಣ ಶಬ್ದ ರೂಪುಗೊಳ್ಳುತ್ತದೆ. ಹಣವು ಎಲ್ಲರಿಗೂ ಬೇಕಾದ ಸಂಪತ್ತು. ಆದರೆ ಆ ಸಂಪತ್ತಿನ ದುರುಪಯೋಗದಿಂದ ಆಪತ್ತು ತುಂಬಿ ಬಂದು ಜೀವನದಲ್ಲಿ ಸುಖ ಶಾಂತಿಗಳ ನಾಶ ಖಂಡಿತ.

**ತ** – ತಪಸ್ಸಿನ ಬಲದಿಂದ ಜೀವನದಲ್ಲಿ ಸಾಧಿಸಲು ಸಾಧ್ಯವಿಲ್ಲದ್ದು ಯಾವುದೂ ಇಲ್ಲ.

**ಥ** – ಥಳಥಳಿಸುವ ಬಂಗಾರದಂತೆ ನಮ್ಮ ಬದುಕು ಬೆಳಗಬೇಕಾದರೆ ಅದರಲ್ಲಿ ನೀತಿ ನಿಯಮಗಳ ಆಚರಣೆ ಕೂಡಿರಬೇಕು.

**ದ** – ದಂಭವು ವ್ಯಕ್ತಿತ್ವದ ವಿಕಾಸಕ್ಕೆ ಆತಂಕಕಾರಿ.

**ಧ** – ಧರ್ಮವೇ ಜೀವನದ ರಕ್ಷಾಕವಚ.

**ನ** – ನಯನಡತೆ ಇಲ್ಲದವನ ಜೀವನ ಚುಕ್ಕಾಣಿ ಇಲ್ಲದ ದೋಣಿಯ ಸಾಗುವಿಕೆಯಂತೆ.

**ಪ** – ಪರಮಾತ್ಮನೊಬ್ಬನೆ; ಅವನಿಗೆ ನಾಮ ರೂಪಗಳು ಹಲವು.

**ಫ** – ಫಾಲಾಕ್ಷನ (ಭಗವಂತನ) ದಿವ್ಯ ದರ್ಶನ ಹೊಂದುವುದೇ ಭಕ್ತಿಯೋಗ ಸಾಧನೆಯ ಪರಮ ಗುರಿ.

**ಬ** – ಬದುಕೆಂದರೆ ಹೋರಾಡಿ ಜಯ ಗಳಿಸಬೇಕಾದ ಸಮರಾಂಗಣವೂ ಹೌದು; ಆಡಿ ನಲಿಯಬೇಕಾದ ಕ್ರೀಡಾಂಗಣವೂ ಹೌದು.

**ಮ**– ಮನಸ್ಸನ್ನು ಗೆದ್ದವನು ಎಲ್ಲವನ್ನೂ ಗೆಲ್ಲುತ್ತಾನೆ.

**ಯ** – ಯಥೋಚಿತವಾದ ನಡೆನುಡಿಗಳಿಂದ ಬದುಕಿನಲ್ಲಿ ಖಂಡಿತವಾಗಿ ಸರ್ವತೋಮುಖವಾದ ಬೆಳವಣಿಗೆಯನ್ನು ಹೊಂದಬಹುದು.

**ರ** – ರಮಾರಮಣನ (ಪರಮಾತ್ಮನ) ಸ್ಮರಣೆ ಧ್ಯಾನಗಳಿಂದ ಸಂಪನ್ನವಾದ ಬದುಕು ನಿತ್ಯ ಸುಂದರ – ನಿತ್ಯಸುರಕ್ಷಿತ!

**ಲ** – ಲಲಿತಕಲೆಗಳು (ಸಾಹಿತ್ಯ, ಸಂಗೀತ, ನೃತ್ಯ, ನಾಟಕ, ಚಿತ್ರ) ಬದುಕಿಗೆ ಬಲ, ಭದ್ರತೆ ಹಾಗೂ ಹರ್ಷೋತ್ಸಾಹದಾಯಕಗಳಾಗಿವೆ.

**ವ** – ವಹಿಸಿಕೊಂಡ ಜವಾಬ್ದಾರಿಯನ್ನು ತಪ್ಪದೇ ನಿರ್ವಹಿಸುವುದು ಉತ್ತಮ ಜೀವನದ ಸಾಧನಾಸೂತ್ರಗಳಲ್ಲೊಂದು.

**ಶ** – ಶಾಸ್ತ್ರಸಮ್ಮತವಾದ ಕಾರ್ಯಾನುಷ್ಠಾನದಿಂದ ಜೀವನದಲ್ಲಿ ಎಂದಿಗೂ ಚ್ಯುತಿ ಉಂಟಾಗಲಾರದು.

**ಷ** – ಷಡ್ರಸಗಳಿಂದ (ಸಿಹಿ, ಹುಳಿ, ಖಾರ, ಕಹಿ, ಒಗರು, ಉಪ್ಪು) ಕೂಡಿದ ಊಟವು ದೇಹ–ಮನಗಳಿಗೆ ಆರೋಗ್ಯ ಹಾಗೂ ಸಂತೃಪ್ತಿದಾಯಕವಾಗಿರುತ್ತದೆ.

**ಸ** – ಸದಾಚಾರ ಸಂಪನ್ನರಾಗಿರುವುದೇ ಜೀವನದ ಧ್ಯೇಯ.

**ಹ** – ಹರಿಹರರ ರೂಪ ಬೇರೆ ಬೇರೆ ಆದರೂ ಅಂತರ್ಯದಲ್ಲಿ ಏಕನೂ, ಸರ್ವವ್ಯಾಪಕನೂ ಆದ ಪರಮಾತ್ಮನೇ ನೆಲಸಿರುವುದರಿಂದ ಹಾಗೆ ಎಂದಿಗೂ ಭೇದಭಾವ ತಳೆಯಬಾರದು.

**ಳ** – ಕನ್ನಡಭಾಷೆಯಲ್ಲಿ 'ಳ' ಅಕ್ಷರದಿಂದ ಆರಂಭವಾಗುವ ಯಾವ ಶಬ್ದವೂ ಇಲ್ಲ. ಆದರೆ 'ಳ' ಅಕ್ಷರವು ಕನ್ನಡ ವರ್ಣಮಾಲೆಯ ಇತರ ಅಕ್ಷರಗಳೊಡನೆ ಶಾಸ್ತ್ರಸಮ್ಮತವಾಗಿ ಸೇರಿದಾಗ ಅರ್ಥಪೂರ್ಣವಾದ ಶಬ್ದಗಳು ರೂಪುಗೊಳ್ಳುವುವು. ಉದಾ : ಕಳಶ, ಅವಳು, ಮಗಳು ಇತ್ಯಾದಿ. ಹಾಗೆಯೇ ವ್ಯಕ್ತಿಯೋರ್ವನು ನೀತಿನಿಯಮನಿಷ್ಠನಾಗಿ ಸಜ್ಜನರ ಜೊತೆ ಒಡನಾಡಿ ಬಾಳಿದಾಗ ಗಣ್ಯನೂ ಮಾನ್ಯನಾಗುತ್ತಾನೆ

**ಕ್ಷ** – ಕ್ಷಮೆ ದೈವೀಗುಣ. ಕ್ಷಮಾವಂತನಿಗೆ ಜೀವನದಲ್ಲಿ ಕ್ಷೇಮವು ತುಂಬಿ ಬರುತ್ತದೆ.

**ಜ್ಞ**– ಜ್ಞಾನವೇ ಎಲ್ಲಕ್ಕಿಂತ ಪವಿತ್ರವಾದುದು.